ಬರುವಂತಹ 2ರಿಂದ 5 ವರ್ಷಗಳಲ್ಲಿ ಅದು implement ಆಗುತ್ತದೆ. 40 ಯೋಜನೆಗಳಿಗೆ sign ಆಗಿರುವಂಥವುಗಳಲ್ಲಿ ನೂರಕ್ಕೆ ನೂರಷ್ಟು ಬರುವುದಿಲ್ಲ. 65% ಗಿಂತಲೂ ಹೆಚ್ಚಿಗೆ ಬರುವಂಥ ಸಾಧ್ಯತೆ ಇದೆ.

ಶ್ರೀ ಯು.ಟಿ.ಖಾದರ್: ಕರಾವಳಿಯಲ್ಲಿ Global Meet ನಡೆದಾಗ ನಮ್ಮನ್ನು ಆಹ್ವಾನಿಸಲಿಲ್ಲ. ನಾವು ಸಮಾವೇಶಕ್ಕೆ ಹೋಗಿ seat ಇಲ್ಲದೇ ಹಿಂದೆ ಬಂದಂಥವರು. ಇವತ್ತು ತಾವು ಜನವರಿಯಲ್ಲಿ ಆದರ ಬಗ್ಗೆ ಮಾತನಾಡುತ್ತಿದ್ದೀರಿ. ಅದರ ಬಗ್ಗೆ ಮುಂದಿನ ದಿನಗಳಲ್ಲಿ result ಬರುತ್ತದೆ. ಇವತ್ತು ನಾನು ಕೇಳುತ್ತಿದ್ದೇನೆ. ಹಿಂದೆ 2005ರಲ್ಲಿ ಪಜೀರ್‌ನಲ್ಲಿ IT Park ಪ್ರಾರಂಭ ಆಯಿತು. ಜಾಗ ಕೊಟ್ಟಿದ್ದೀರಿ. ಕೇವಲ Infosys ನವರು ಮಾತ್ರ ಪ್ರಾರಂಭ ಮಾಡಿ ಮಧ್ಯದಲ್ಲಿ ಲೀಲಾ ಪ್ಯಾಲೇಸ್‌ನವರು ಹೊಟೇಲ್ ಕಟ್ಟಲು ಪ್ರಾರಂಭ ಮಾಡಿದರು.

ಅಧ್ಯಕ್ಷರು: ಅಗತ್ಯವಿರುವುದನ್ನು ಮಾತ್ರ ಮಾತನಾಡಿ. ಆಗಲೇ ಎಲ್ಲಾ ಹೇಳಿದ್ದಾರೆ. ನೀವು ಮತ್ತೆ ಮಾತನಾಡಿದರೆ ಹೇಗೆ?

ಶ್ರೀ ಯು.ಟಿ.ಖಾದರ್: ಅದರ ಜೊತೆಯಲ್ಲಿ ನಮ್ಮ ಜಿಲ್ಲೆಯಲ್ಲಿರುವ ಗುರುಪುರದಲ್ಲಿ IT Park ನಲ್ಲಿಯೂ ಒಂದೇ ಒಂದು ಕಂಪನಿ ಪ್ರಾರಂಭವಾಗಲಿಲ್ಲ. ಇದೂ ಕೂಡ ಅದೇ ರೀತಿ ಆಗುತ್ತದೆಯೋ ಎನ್ನುವ ಭಯ ನಮಗೆ ಬರುತ್ತದೆ. ಅದಲ್ಲದೇ connectivity ಶಿರಾಡಿಯಿಂದ ಮಂಗಳೂರಿನವರೆಗಿನ ರಸ್ತೆಯಲ್ಲಿ ಗುಂಡಿ ಮುಚ್ಚಿಸುವ ಕೆಲಸ ಕೂಡ ಸರ್ಕಾರದಿಂದ ಆಗುತ್ತಿಲ್ಲ.

ಶ್ರೀ ಮುರುಗೇಶ್ ಆರ್.ನಿರಾಣಿ: ಕೈಗಾರಿಕೆ ಪ್ರದೇಶದಿಂದ ಹೊರತುಪಡಿಸಿ ಬಂದಿರುವ ಪ್ರದೇಶಗಳನ್ನು ಸಂಬಂಧಪಟ್ಟ ಇಲಾಖೆಗಳು ಗಮನಹರಿಸಿ ಅದನ್ನು ಕಾರ್ಯರೂಪಕ್ಕೆ ತರುವಂಥ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು: ಮಾನ್ಯ ಹೆಚ್.ಕೆ.ಕುಮಾರಸ್ವಾಮಿಯವರು ಪ್ರಶ್ನೆ ಕೇಳುವುದು.

ಶೀತಪೀಡಿತ ಹಳ್ಳಿಗಳನ್ನು ಸ್ಥಳಾಂತರಿಸುವುದು

16 (513) ಶ್ರೀ ಹೆಚ್.ಕೆ.ಕುಮಾರಸ್ವಾಮಿ

ಅ) ಹಾಸನ ಸಕಲೇಶಪುರ ಮತ್ತು ಆಲೂರು ತಾಲ್ಲೂಕಿನ 17 ಹಳ್ಳಿಗಳು ಹೇಮಾವತಿ ಜಲಾಶಯ ಹಿನ್ನೀರಿನಿಂದ ಶೀತಪೀಡಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಹಳ್ಳಿಗಳನ್ನು ಸ್ಥಳಾಂತರಿಸಲು ಮತ್ತು ಪುನರ್ವಸತಿ ಕಲ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು)

ಅ) ಹೌದು,

ಆ) ಹಾಸನ ಜಿಲ್ಲೆ, ಹಾಸನ, ಸಕಲೇಶಪುರ ಮತ್ತು ಆಲೂರು ತಾಲ್ಲೂಕಿನ 17 ಗ್ರಾಮಗಳು ಶೀತಪೀಡಿತ ಗ್ರಾಮವೆಂದು ಪರಿಗಣಿಸುವಂತೆ ಗ್ರಾಮಸ್ಥರು ಕೋರಿರುತ್ತಾರೆ. ಹೇಮಾವತಿ ಯೋಜನೆ ಮತ್ತು ಯಗಚಿ ಯೋಜನೆಗಳಡಿಯಲ್ಲಿ ಶೀತಪೀಡಿತವಾಗಿರುವ ಗ್ರಾಮಗಳನ್ನು ಗುರುತಿಸಿ ಸ್ಥಳಾಂತರಿಸಲು ಶಿಫಾರಸ್ಸು ಮಾಡುವ ಬಗ್ಗೆ ಸರ್ಕಾರಿ ಆದೇಶ ಸಂಖ್ಯೆ: ಕಂಇ 215 ಆರ್‌ಇಪಿಚ್ 2008, ದಿನಾಂಕ: 11-12-2008, ರಲ್ಲಿ ಪ್ರಾದೇಶಿಕ ಆಯುಕ್ತರು, ಮೈಸೂರು ರವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿಯನ್ನು ರಚಿಸಲಾಗಿದೆ. ಸದರಿ ಸಮಿತಿಯು ಸೂಕ್ತ ನಿರ್ಣಯ ತೆಗೆದುಕೊಳ್ಳಲು ಬೇಕಾಗಿರುವ ಮಾಹಿತಿಗಳನ್ನು ಸಂಗ್ರಹಿಸಿ ಒದಗಿಸಲಾಗಿದೆ. ನಂತರ ಸಮಿತಿಯು ಈ 17 ಗ್ರಾಮಗಳ ಪೈಕಿ 12 ಗ್ರಾಮಗಳನ್ನು ದಿನಾಂಕ: 20-06-2012 ರಂದು ಸ್ಥಳ ಪರಿಶೀಲನೆ ಮಾಡಿ, ವರದಿಯನ್ನು ಕಂದಾಯ ಇಲಖೆಗೆ ಸಲ್ಲಿಸಿರುತ್ತದೆ.

ಕಂದಾಯ ಇಲಾಖೆಯ ಶಿಫಾರಸ್ಸಿನನ್ವಯ ಮುಂದಿನ ಕ್ರಮ ಜರುಗಿಸಲಾಗುವುದು.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ. ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ನನ್ನ ಕ್ಷೇತ್ರದ ಹಾಸನ ಜಿಲ್ಲೆಯ ಸಕಲೇಶಪುರ, ಆಲೂರು ಮತ್ತು ಹಾಸನ ತಾಲ್ಲೂಕಿನ 17 ಹಳ್ಳಿಗಳು ಹೇಮಾವತಿ ಜಲಾಶಯದ ಹಿನ್ನೀರಿನಿಂದ ಶೀತಪೀಡಿತ ಆಗಿರುವುದು ನಿಜ ಎನ್ನುವ ಮಾತನ್ನು ಹೇಳಿದ್ದಾರೆ. ಆದರೆ ಇದಕ್ಕೆ 2006 ರಲ್ಲಿಯೇ ನಮ್ಮ ಹಿಂದಿನ ಸರ್ಕಾರ ಇದ್ದಾಗ, ಸ್ಥಳೀಯ ಅಧಿಕಾರಿಗಳು ಸ್ಥಳ ತನಿಖೆ ಮಾಡಿ ಹೇಮಾವತಿ ಜಲಾಶಯದ ಹಿನ್ನೀರಿನಿಂದ ಇವುಗಳನ್ನು ಶೀತಪೀಡಿತ ಪ್ರದೇಶಗಳೆಂದು ಘೋಷಣೆ ಮಾಡಿ ಪುನರ್ವಸತಿ ಕಲ್ಪಿಸಬೇಕೆಂಬ ವರದಿ ಕೊಟ್ಟಿದ್ದರು. ಆದಾದ ಮೇಲೆ 11.12.2008ರ ಆದೇಶದ ಪ್ರಕಾರ ಒಂದು ಸಮಿತಿಯನ್ನು ಸರ್ಕಾರವು ನೇಮಿಸಿದೆ. ಆದರೆ ಈ ಸಮಿತಿಯವರು ಆಶ್ಚರ್ಯವೆಂದರೆ ಕಳೆದ ಫೆಬ್ರವರಿ 8 ರಂದು ಅಲ್ಲಿಗೆ ಹೋಗಿ ಭೇಟಿ ಕೊಟ್ಟಿದ್ದಾರೆ. ಫೆಬ್ರವರಿ ತಿಂಗಳಲ್ಲಿ ಹೋದರೆ ಆ ಹಳ್ಳಿಯಲ್ಲಿ ಯಾವ ರೀತಿಯಾಗಿ ಶೀತಪೀಡಿವಾಗಿದೆ ಎಂದು ಹೇಗೆ ಕಂಡು ಹಿಡಿಯುವುದಕ್ಕಾಗುತ್ತದೆ. ಈ ಹಿಂದಿನ ಮಾಜಿ ಮುಖ್ಯಮಂತ್ರಿಗಳಾಗಿದ್ದಂತಹ ಶ್ರೀ

ಹೆಚ್.ಡಿ.ಕುಮಾರಸ್ವಾಮಿಯವರು ಮತ್ತು ಈ ಹಿಂದಿನ ಮಾಜಿ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಂತಹ ಶ್ರೀ ಹೆಚ್.ಡಿ.ರೇವಣ್ಣನವರು ಆ ಸಮಯದಲ್ಲಿ ನಾನು ಕೂಡ ಮಂತ್ರಿಯಾಗಿದ್ದೆ, ನಾನು ಅಲ್ಲಿಗೆ ಹೋಗಿ ನೋಡಿದಾಗ ಅಲ್ಲಿ ಹುಲ್ಲು,ಹುಲ್ಲು ಮೇಲೆ ಗೋಣಿಚೀಲ, ಅದರ ಮೇಲೆ ಮಲಗುತ್ತಿದ್ದರು. ಸುಮಾರು 4 ರಿಂದ 5 ಇಂಚು ನೀರು ನಿಲ್ಲುವುದರಿಂದ ಅಲ್ಲಿ ವಾಸ ಮಾಡುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಆ ತರಹ ಪರಿಸ್ಥಿತಿ ಇತ್ತು. ಇವರು ಫೆಬ್ರವರಿ 17 ರಲ್ಲಿ ಅಲ್ಲಿಗೆ ಹೋಗಿದ್ದಾರೆ. ಆಗ ಯಾವ ರೀತಿಯಾದಂತಹ ವರದಿಯನ್ನು ಕೊಡುವುದಕ್ಕಾಗುವುದಿಲ್ಲ. ಮೊನ್ನೆ 20.6.2012 ರಲ್ಲಿ ಪುನಃ ಸ್ಥಳತನಿಖೆಯನ್ನು ಮಾಡಿದ್ದಾರೆ ಮೊನ್ನೆ ಬರಗಾಲ ಬಂದು ಶೇಕಡ 20ರಷ್ಟು ಮಳೆಯಾಗಲಿಲ್ಲ. ಡ್ಯಾಂಗೆ ಸ್ವಲ್ಪವೂ ನೀರು ಬಂದಿಲ್ಲ. ಅಲ್ಲಿ ಶೀತಪೀಡಿತ ಪ್ರದೇಶವಾಗುವುದಕ್ಕೆ ಬರುವುದಿಲ್ಲ. ಈ ರೀತಿಯಾದಂತಹ ವರದಿಯ ಮೇಲೆ ರೈತರಿಗೆ ನ್ಯಾಯ ಸಿಗುವುದಕ್ಕೆ ಸಾಧ್ಯವಿಲ್ಲ. ದಯಮಾಡಿ ಸಮಿತಿಯವರೆ ಮತ್ತೊಮ್ಮೆ ವಿಸಿಟ್ ಮಾಡಬೇಕು ಆಗಸ್ಟ್ 15 ರ ನಂತರ ವಿಸಿಟ್ ಮಾಡಿದರೆ ಏನಾದರೂ ನ್ಯಾಯ ದೊರಕುವುದಕ್ಕೆ ಸಾಧ್ಯವಾಗುತ್ತದೆ ಎಂದು ನಾನು ಒತ್ತಾಯವನ್ನು ಮಾಡುತ್ತಿದ್ದೇನೆ.

ಶ್ರೀ ಹೆಚ್.ಡಿ.ರೇವಣ್ಣ:– ಮಾನ್ಯ ಅಧ್ಯಕ್ಷರೆ, 17 ಹಳ್ಳಿಗಳಲ್ಲಿ ಈಗಾಗಲೇ 1994–95ನೇ ಇಸವಿಯಲ್ಲಿ ಈ ಬಗ್ಗೆ ತೀರ್ಮಾನ ಮಾಡಿದ್ದಾರೆ. ಈ ಬಗ್ಗೆ ತಾವು ಬೇಕಾದರೆ ಹಿಂದಿನ ಕಡತವನ್ನು ತೆಗೆಸಿ ನೋಡಬಹುದು. ಹೇಮಾವತಿ ಡ್ಯಾಂ ಅನ್ನು ಕಟ್ಟಿ 17 ಹಳ್ಳಿಗಳು ಇವತ್ತುcomplete ಡ್ಯಾಂ ತುಂಬಿದ ತಕ್ಷಣ ಆ ಊರಿನಲ್ಲಿ 1 ರಿಂದ 2 ಅಡಿ ನೀರು ನಿಲ್ಲುತ್ತದೆ. ಜನರು ಅದರ ಒಳಗಡೆ ವಾಸ ಮಾಡುವುದಕ್ಕಾಗುವುದಿಲ್ಲ. ಇವರು ಅಲ್ಲಿಗೆ ಬೇಸಿಗೆ ಕಾಲದಲ್ಲಿ ನೀರು ಇಲ್ಲದಿದ್ದಾಗ ಹೋಗಿ ವರದಿ ಕೊಟ್ಟಿದ್ದೇವೆಂದರೆ ಏನರ್ಥ. ಈ ವರದಿಯನ್ನು ಕೊಡುವುದಕ್ಕೆ Divisional Commissionerರವರು 4 ವರ್ಷಗಳ ಕಾಲವನ್ನು ತೆಗೆದುಕೊಂಡಿದ್ದಾರೆ. ದಿನಾಂಕ : 20.6.2012 ರಂದು ಸ್ಥಳ ಪರಿಶೀಲನೆ ಮಾಡಿ ವರದಿಯನ್ನು ಕಂದಾಯ ಇಲಾಖೆಗೆ ಮಂಡಿಸಿದ್ದೇವೆಂದು ಹೇಳುತ್ತಾರೆ. ಈಗಾಗಲೇ 1994–95ನೇ ಇಸವಿಯಲ್ಲಿ ಈ ಬಗ್ಗೆ ಸರ್ವೆ ಕಾರ್ಯವು ಆಗಿದೆ. ಅದಕ್ಕಾಗಿ ತಾವು ವರದಿಯನ್ನು ಕಾಯುವುದು ಬೇಡ. ದಯಮಾಡಿ ಈ ಬಗ್ಗೆ ಇವತ್ತು announce ಮಾಡಬೇಕು. ಇವತ್ತು ಅಲ್ಲಿ ಡ್ಯಾಂ ತುಂಬಿದೆ. ನೀವೇ ಬೇಕಾದರೆ ಅಲ್ಲಿಗೆ ಖುದ್ದಾಗಿ ಬಂದು ನೋಡಬಹುದು. ಏಕೆಂದರೆ ಅಲ್ಲಿ ಅರ್ಧ ಅಡಿ ಮರದ ಹಲಗೆಯನ್ನು ಹಾಕಿ, ಹುಲ್ಲು ಮೆದೆಯನ್ನು ಹಾಕಿಕೊಂಡು ಅಲ್ಲಿ ಜನರು ಮಲಗುತ್ತಿದ್ದಾರೆ. ಮುಳುಗಡೆ ಪ್ರದೇಶ ಕೆಲವು ಕಡೆಗಳಲ್ಲಿ ರಸ್ತೆ,

ಕುಡಿಯುವ ನೀರು, ದೇವಸ್ಥಾನಗಳು ಆಗಿರುವುದಿಲ್ಲ. ಅದನ್ನು ಮಾಡಿಕೊಡಬೇಕೆಂದು ಸನ್ಮಾನ್ಯ ನೀರಾವರಿ ಮಂತ್ರಿಗಳನ್ನು ಕೇಳುತ್ತಿದ್ದೇನೆ.

ಶ್ರೀ ಬಸವರಾಜ ಬೊಮ್ಮಾಯಿ : ಮಾನ್ಯ ಸಭಾಧ್ಯಕ್ಷರೆ, ಈ ಶೀತಪೀಡಿತ ಗ್ರಾಮಗಳು ಎನ್ನುವುದು ಹಿನ್ನೀರಿನಿಂದ ಉದ್ಭವಿಸಿದೆ. FRL ಅನ್ನು ಮುಟ್ಟಿದಂತಹ ಸಂದರ್ಭದಲ್ಲಿ ಆ ನೀರಿನ ವಿಸ್ತರಣೆ ಆಗುತ್ತಿದೆ. ಇದು ರಾಜ್ಯಮಟ್ಟದ ಎಲ್ಲಾ ಜಲಾಶಯಗಳಿಗೆ ಅನ್ವಯಿಸುತ್ತದೆ. ಈ ಒಂದು ಪ್ರದೇಶದಲ್ಲಿ ಜಾಸ್ತಿ ಆಗುತ್ತಿದೆ ಎನ್ನುವುದು ಗಮನಕ್ಕೆ ಬಂದ ಮೇಲೆ ಇದನ್ನು ವೈಜ್ಞಾನಿಕವಾಗಿ ಮಾಡಬೇಕಾಗುತ್ತದೆ ಏಕೆಂದರೆ, R&R ಮಾಡುವಂತಹದ್ದು Revenue Department. ಆ ರೆವಿನ್ಯೂ ಇಲಾಖೆಯವರು ವಿಭಿನ್ನವಾಗಿರುವಂತಹ ಒಂದು ತನಿಖೆಯನ್ನು ಮಾಡಿರುವಂತಹ ಸಂದರ್ಭದಲ್ಲಿ ನಾವು Regional Commissioner ರವರಿಂದ ವರದಿ ಮಾಡಬೇಕು ಎಂದು ಮತ್ತೆ ಅದಕ್ಕಾಗಿ ಒಂದು ತಾಂತ್ರಿಕ ಸಮಿತಿಯನ್ನು ಕೂಡ ಮಾಡಿದ್ದೇವೆ. ಹಿಂದಿನ PWD Secretary ಯವರು ಮತ್ತು ನಮ್ಮ ಇಲಾಖೆಯ Secretaryಯವರುಗಳು ಅದಕ್ಕೆ ಮಾನದಂಡವನ್ನು ಫಿಕ್ಸ್ ಮಾಡಬೇಕೆಂದು ಹೇಳಿದರು. ಈಗ ಅದಕ್ಕೆ ಮಾನದಂಡವನ್ನು ಫಿಕ್ಸ್ ಮಾಡಿದ್ದೇವೆ. Indian Institute of Science ನ Professor ಅವರ ಒಂದು ಸಹಾಯವನ್ನೂ ಸಹ ನಾವು ತೆಗೆದುಕೊಂಡಿದ್ದೇವೆ. ಈಗಾಗಲೇ 12 ಗ್ರಾಮಗಳಿಗೆ ಅವರು ಭೇಟಿ ಕೊಟ್ಟು ಶಿಫಾರಸ್ಸು ಮಾಡಿ ಕಳುಹಿಸಿಕೊಟ್ಟಿದ್ದಾರೆ. ಮತ್ತೆ ಇದು ವಿಳಂಭವಾಗುವಂತಹ ಅವಶ್ಯಕತೆ ಇಲ್ಲ ಎನ್ನುವುದು ನನ್ನ ಭಾವನೆಯಾಗಿದೆ. ನಾನು ನಿಮ್ಮ ಪರವಾಗಿ ಮಾತನಾಡು-ತ್ತಿದ್ದೇನೆ. ಆದಾಗ್ಯೂ ಕೂಡ ನೀರು ಇದ್ದಾಗ ಮಳೆ ಬಂದು ನೀರು ತುಂಬಿದಾಗ ಭೇಟಿ ಕೊಡಬೇಕೆಂದರೆ, ಅವರು ಹೇಳಿರುವಂತಹ ಸಲಹೆಯ ಅನುಗುಣವಾಗಿ ಆRegional Commissioner ರವರು ಮತ್ತು Technical Experts ರವರು ಹಿನ್ನೀರಿನ ನೀರು ಸಂಪೂರ್ಣವಿದ್ದಾಗ ಇನ್ನೊಮ್ಮೆ ಭೇಟಿ ಕೊಟ್ಟು ಆ ಶೀತಪ್ರದೇಶದ ಪುನರ್ ಪರಿಶೀಲನೆಯನ್ನು ಮಾಡಿ ನಾವು ಮಾಡುವುದಕ್ಕೆ ಸಿದ್ಧರಿದ್ದೇವೆ. ಅದು ನನ್ನ ಇಲಾಖೆಯ ಕೆಲಸ. ರೆವಿನ್ಯೂ ಇಲಾಖೆಯವರು ಶಿಫಾರಸ್ಸು ಮಾಡಿದರೆ ನಾವು ದುಡ್ಡನ್ನು ಕೊಡುವುದಕ್ಕೆ ತಯಾರಿದ್ದೇವೆ. ಉದಾಹರಣೆಗೆ ಹೆಮ್ಮಸಮದ್ರ ಎಂಬ ಹಳ್ಳಿಗೆ ಅದು ಶೀತಪೀಡಿತ ಪ್ರದೇಶವಾಗಿದ್ದು ಅಲ್ಲಿಗೆ ಸುಮಾರು 21 ಕೋಟಿ ರೂಪಾಯಿಗಳನ್ನು ನಾವು ಬಿಡುಗಡೆ ಮಾಡಿದ್ದೇವೆ. ಅದೇ ರೀತಿಯಾಗಿ ಚನ್ನರಾಯಪಟ್ಟಣ ಚಿಕ್ಕಗೊಂಡನ-ಹಳ್ಳಿಗೆ 3.76 ಕೋಟಿ ರೂಪಾಯಿಗಳನ್ನು ಸಹ ಬಿಡುಗಡೆ ಮಾಡಿದ್ದೇವೆ. ಇಲ್ಲಿ

ನನ್ನ ಇಲಾಖೆ ಕೆಲಸವೇನೆಂದರೆ, ರಿಪೋರ್ಟ್ ಬಂದ ತಕ್ಷಣ ಅದಕ್ಕೇನು ದುಡ್ಡು ಕೊಡಬೇಕಾಗಿದೆಯೋ ಅದಕ್ಕೆ ಖಂಡಿತವಾಗಿ provision ಮಾಡಿ ಕೊಡುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ : ಚನ್ನರಾಯಪಟ್ಟಣ ನುಗ್ಗೇಹಳ್ಳಿಗೆ ದುಡ್ಡನ್ನು ಕೊಟ್ಟಿದ್ದೀರಾ ಸಾರ್? ದಂಡಿಗನಹಳ್ಳಿ, ಅಲ್ಲಿ 4(1) ಆಗಿ 6(1) ಆಗಿ ಅಲ್ಲಿ ಅವಾರ್ಡ್ ಎಲ್ಲವೂ ಆಗಿದೆ. ಅವರು ದಿನವೂ ಎಷ್ಟು ಸಲ ಆಫೀಸಿಗೆ ಹೋಗಿ ತಿರುಗುತ್ತಾರೆ?

ಶ್ರೀ ಬಸವರಾಜ ಬೊಮ್ಮಾಯಿ: ಇದು ಶೀತಪ್ರದೇಶದ್ದು, Land acquisition ಎರಡು ಬೇರೆ ವಿಚಾರಗಳಾಗಿದೆ.

ಶ್ರೀ ಹೆಚ್.ಡಿ.ರೇವಣ್ಣ : ತಾವೇನು ಬೇಲೂರಿನ ಹೆಮ್ಮಸಂದ್ರ ಬಗ್ಗೆ ಹೇಳಿದ್ದೀರಿ, ಅದೇ ರೀತಿ ತುಂಬೇನಹಳ್ಳಿ ವಿಚಾರ ಇದೆ ಸ್ವಾಮಿ. ಅಲ್ಲಿ ಇನ್ನು ಹಲವಾರು ಹಳ್ಳಿಗಳು ಇವೆ.

ಶ್ರೀ ಬಸವರಾಜ ಬೊಮ್ಮಾಯಿ : ಅವೆಲ್ಲವೂ ರೆವಿನ್ಯೂ ಇಲಾಖೆಯಿಂದ ಬಂದ ತಕ್ಷಣ ಮಾಡುತ್ತೇವೆ.

ಶ್ರೀ ಹೆಚ್.ಡಿ.ರೇವಣ್ಣ : ಅದಕ್ಕೆ L.O.C.ಯನ್ನು ಕೊಡುವುದಕ್ಕೆ ಏನೂ ತೊಂದರೆ ಇಲ್ಲ. ಗ್ರಾಮಗಳಿಗೆ ರಸ್ತೆಯನ್ನು ಮಾಡಿಕೊಡುವ ಬಗ್ಗೆ ಏನೂ ತೊಂದರೆ ಇಲ್ಲ. ಹಳೆಯ ಗ್ರಾಮಗಳಿಗೆ ಕುಡಿಯುವ ನೀರು ಬೇಕು. ಅಲ್ಲಿ ಟೆಂಪಲ್ ಇರುವುದಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ : ಹಳೆಯ R&R Centre ಗಳಿಗೆ ಯಾವುದೂತೊಂದರೆ ಇಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ಈ ವರ್ಷ ಒಂದಾದರೂ ಕೊಡಿ ಸ್ವಾಮಿ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ :Rehabilitation ಕೆಲಸ ಮುಗಿದಿಲ್ಲ. ಇನ್ನು ಶೇಕಡ 75ರಷ್ಟು ಕೆಲಸಗಳು ಆಗಬೇಕಾಗಿದೆ.

ಶ್ರೀ ಬಸವರಾಜ ಬೊಮ್ಮಾಯಿ : ಇದು ಬಹಳ ಹಳೆಯ ಯೋಜನೆಯಾಗಿದೆ. ಈಗಾಗಲೇ ಅಲ್ಲಿ ಕೆಲಸ ಆಗಿದೆ. ಪುನಃ ಮತ್ತೆ ಕೆಲಸಗಳು ಬಂದಿವೆ. ಎಲ್ಲೆಲ್ಲಿ ಮೂಲಭೂತ ಸೌಕರ್ಯವಿಲ್ಲದೇ ಅಲ್ಲಿರುವಂತಹ ಜನರಿಗೆ ತೊಂದರೆಯಾಗುತ್ತದೆ ಅಲ್ಲಿಗೆ ನಾವು ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡುತ್ತೇವೆ. ಅವುಗಳನ್ನು ನಮ್ಮ ಇಲಾಖೆಯ ಅಡಿಯಲ್ಲಿ ಮಾಡುತ್ತೇವೆ. ಯಾವುದು RDPR Department ಗೆ ಹೋಗಿದೆ ಅವನ್ನು ಆ ಇಲಾಖೆಯ ಮುಖಾಂತರ ಮಾಡಿಸುವ ಬಗ್ಗೆ ಶಿಫಾರಸ್ಸು ಮಾಡಿದ್ದೇವೆ.

ಅಧ್ಯಕ್ಷರು : ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.